# ಟ್ರಾನ್ಸ್‌ಪರೆಂಟ್ ಐಫೋನ್

**ಐಫೋನ್; 'ಐಓಎಸ್ 18' ಆವೃತ್ತಿಯಿಂದ 'ಐಓಎಸ್ 26'ಗೆ ಏಕಾಏಕಿ ಜಂಪ್ ಆಗಲಿದೆ. ಹೊಸ ಓಎಸ್‌ನಲ್ಲಿ ಏನೆಲ್ಲಾ ಇರಲಿದೆ ಗೊತ್ತಾ?**

■ **ಶಶಿಕುಮಾರ್ ಸಿ.**




ವರ್ಷಕ್ಕೊಂದು ಹೊಸ ಫೋನ್ ಬಿಡುಗಡೆ ಮಾಡಿ ಸುದ್ದಿಯಲ್ಲಿರುವ ಆ್ಯಪಲ್‌ನ ಐಫೋನ್ ಈಗ ಓಎಸ್‌ನ (ಕಾರ್ಯಾಚರಣ ವ್ಯವಸ್ಥೆ) ಸುದ್ದಿಯನ್ನು ತಂದಿದೆ. ಐಫೋನ್‌ಗಳಲ್ಲೀಗ 'ಐಓಎಸ್ 18' ಆವೃತ್ತಿಯು ಬಳಕೆಯಲ್ಲಿದ್ದು, ಈ ಜಾಗಕ್ಕೆ ಮುಂದಿನ ಸೆಪ್ಟೆಂಬರ್ ಅಥವಾ 2026ರ ಪ್ರಾರಂಭದ ಹೊತ್ತಿಗೆಲ್ಲ 'ಐಓಎಸ್ 26' ಪರಿಚಯಿಸಲು ಸಿದ್ಧತೆ ನಡೆಸಿದೆ.

'ಡಬ್ಲ್ಯುಡಬ್ಲ್ಯುಡಿಸಿ25' ವಾರ್ಷಿಕ ಕಾರ್ಯಕ್ರಮದಲ್ಲಿ ಈ ಬಗ್ಗೆ ಅಧಿಕೃತವಾಗಿ ಮಾಹಿತಿ ನೀಡಿರುವ ಕಂಪನಿಯು, ತನ್ನ ಪ್ರತಿಷ್ಠಿತ ಉತ್ಪನ್ನವಾದ ಐಫೋನ್‌ನ ಕಾರ್ಯಾಚರಣ ವ್ಯವಸ್ಥೆಗೆ ಹಲವು ಬದಲಾವಣೆಗಳನ್ನು ತರುತ್ತಿರುವುದಾಗಿಯೂ ತಿಳಿಸಿದೆ. ಇದು ಐಫೋನ್ ಪ್ರಿಯರಲ್ಲಿ ಹಲವು ನಿರೀಕ್ಷೆಗಳನ್ನು ಹುಟ್ಟುಹಾಕಿದೆ.

## ಐಫೋನ್‌ಗೆ 'ಲಿಕ್ವಿಡ್ ಗ್ಲಾಸ್' ಹಿರಿಮೆ

ಈ ಓಎಸ್‌ನಲ್ಲಿ 'ಲಿಕ್ವಿಡ್ ಗ್ಲಾಸ್ ಯುಐ' ಫೀಚರ್ ಪರಿಚಯಿಸಿದ್ದು, ಇದು ಐಫೋನ್ ಬಳಕೆದಾರರಿಗೆ ಹೊಸ ಅನುಭವ ನೀಡಲಿದೆ. ಐಫೋನ್‌ನಲ್ಲಿ ಸಾಧ್ಯವಾಗುವ ಎಲ್ಲ ಕಡೆಯಲ್ಲೂ ಈ ಟ್ರಾನ್ಸ್‌ಪರೆಂಟ್ ಆಯ್ಕೆ ಅಳವಡಿಸಲಾಗಿದ್ದು, ಇದು ವಿಭಿನ್ನ ಅನುಭವ ಕಟ್ಟಿಕೊಡುತ್ತದೆ. ಇದಕ್ಕೆ ಲಿಕ್ವಿಡ್ ಗ್ಲಾಸ್ ಯುಐ ಅಥವಾ ಟ್ರಾನ್ಸ್‌ಪರೆಂಟ್ ಯುಐ ಡಿಸೈನ್ ಅಂತ ಕರೆದಿದೆ.

ಟಾಸ್ಕ್‌ಬಾರ್ ಸ್ಲೈಡ್ ಮಾಡಿದರೆ ಫುಲ್ ಟ್ರಾನ್ಸ್‌ಪರೆಂಟ್ ಆಗಿ ಕಾಣುವಂತೆ ಹೊಸ ಆವೃತ್ತಿಯನ್ನು ವಿನ್ಯಾಸಗೊಳಿಸಲಾಗಿದೆ. ಅಂತೆಯೇ ಫೋನ್‌ನಲ್ಲಿರುವ ಎಲ್ಲ ಐಕಾನ್‌ಗಳೂ ಟ್ರಾನ್ಸ್‌ಪರೆಂಟ್ ಆಗಿ ಕಾಣಲಿವೆ. ಕಸ್ಟಮೈಸ್ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಮ್ಯಾಪ್ಸ್, ಕ್ಯಾಮೆರಾ, ಫೋಟೊ, ಕಾಲಿಂಗ್ ಅಪ್ಲಿಕೇಷನ್‌ಗಳಲ್ಲೂ ಇದನ್ನು ಕಾಣಬಹುದು.

## ಸೆಳೆಯುವ 'ಸ್ಪೇಷಿಯಲ್ ಸೀನ್'

3ಡಿ ಆಧರಿತ ಆಯ್ಕೆಯೇ ಈ ಸ್ಪೇಷಿಯಲ್ ಸೀನ್. ಫೋಟೊಸ್ ಆ್ಯಪ್‌ನಲ್ಲಿರುವ ಫೋಟೊವನ್ನು ವಾಲ್‌ಪೇಪರ್‌ಗೆ ಲೈವ್ಲಿಯಾಗಿ ಸೆಟ್ ಮಾಡಲು ಇದು ಅನುಕೂಲ ಮಾಡಿಕೊಡಲಿದೆ. ಉದಾಹರಣೆಗೆ ಆನೆಯೊಂದರ ಚಿತ್ರವನ್ನು ವಾಲ್‌ಪೇಪರ್‌ಗೆ ಸೆಟ್ ಮಾಡಲು ಇಷ್ಟಪಟ್ಟರೆ ಫೋಟೊಸ್ ಆ್ಯಪ್‌ಗೆ ಹೋಗಿ ಆ ಫೋಟೊವನ್ನು ಕ್ಲಿಕ್ಕಿಸಿದಾಗ, ಈ ಸ್ಪೇಷಿಯಲ್ ಸೀನ್ ಫೀಚರ್ ಕಾಣುತ್ತದೆ. ಅದನ್ನು ಕ್ಲಿಕ್ಕಿಸಿದರೆ ಚಿತ್ರವನ್ನು 3ಡಿ ಚಿತ್ರವನ್ನಾಗಿ ಬದಲಾಯಿಸುತ್ತದೆ. ಅದನ್ನು ವಾಲ್‌ಪೇಪರ್ ಆಗಿ ಸೆಟ್ ಮಾಡಿಕೊಂಡಲ್ಲಿ, ನಿಮ್ಮ ಫೋನ್ ಅಲುಗಾಡಿಸಿದಾಗ, ತಿರುಗಿಸಿದಾಗ ವಾಲ್‌ಪೇಪರ್‌ನಲ್ಲಿನ ಆನೆಯ ಚಿತ್ರವೂ ಅದರಂತೆಯೇ ಅಲುಗಾಡುತ್ತದೆ, ತಿರುಗುತ್ತದೆ.

## ಲಾಕ್ ಸ್ಕ್ರೀನ್‌ಗೂ ಕಸ್ಟಮೈಸ್

ಕಸ್ಟಮೈಸ್ ಆಯ್ಕೆಯೇ ಐಫೋನ್‌ನಲ್ಲಿದ್ದ ಬಹುದೊಡ್ಡ ಕೊರತೆ. ಅದನ್ನು ಈಗೀಗ ನೀಗಿಸಲು ಆ್ಯಪಲ್ ಮುಂದಾಗಿದ್ದು, ಹೊಸ ಆವೃತ್ತಿಯಲ್ಲಿ ಲಾಕ್‌ಸ್ಕ್ರೀನ್ ಕಸ್ಟಮೈಸ್ ಮಾಡಬಹುದು. ಲಾಕ್‌ಸ್ಕ್ರೀನ್‌ನಲ್ಲಿ ಕಾಣುವ ದಿನಾಂಕ, ಸಮಯವನ್ನು ಡ್ರ್ಯಾಗ್ ಮಾಡುವ ಮೂಲಕ ದೊಡ್ಡದಾಗಿ, ಚಿಕ್ಕದಾಗಿ ಮಾರ್ಪಡಿಸಬಹುದು. ಲಾಕ್‌ಸ್ಕ್ರೀನ್‌ನಲ್ಲಿ ಟ್ರಾನ್ಸ್‌ಪರೆಂಟ್ ರೀತಿಯಲ್ಲಿ ನೋಟಿಫಿಕೇಷನ್‌ಗಳು ಕಾಣಿಸಿಕೊಳ್ಳುತ್ತವೆ.

## ಓಎಸ್‌ಗೆ ಇಸವಿಯ ನಂಟು

ಐಫೋನ್‌ಗಳಲ್ಲಿ 'ಐಓಎಸ್ 18' ಬಳಕೆಯಲ್ಲಿದೆ. ಹೊಸ ಓಎಸ್ ಐಓಎಸ್ 26 ಆಗಿದ್ದು, ಈ ಹೆಸರಿಡಲು ಇಸವಿಯ ಹೊಂದಾಣಿಕೆಯತ್ತ ಆ್ಯಪಲ್ ದೃಷ್ಟಿ ಹರಿಸಿದೆ ಎನ್ನಲಾಗಿದೆ. ■

### ಕಾಲಿಂಗ್ ಅಪ್ಲಿಕೇಷನ್

ಇಲ್ಲಿ 'ಯುನಿಫೈಡ್' ಫೀಚರ್ ಪರಿಚಯಿಸಲಾಗಿದ್ದು, ಈಗ ಚಾಲ್ತಿಯಲ್ಲಿರುವ ಕ್ಲಾಸಿಕ್ ಆಯ್ಕೆಯನ್ನೂ ಉಳಿಸಿಕೊಳ್ಳಲಾಗಿದೆ. ಯುನಿಫೈಡ್ ಫೀಚರ್‌ನಲ್ಲಿ ಕರೆಗಳು, ಮಿಸ್ಡ್ ಕಾಲ್‌ಗಳು ಎಲ್ಲವೂ ಒಂದೇ ಕಡೆ ಲಭ್ಯವಾಗುವಂತೆ ಮಾಡಲಾಗಿದೆ. ಕೀಪ್ಯಾಡ್ ಹಾಗೂ ಕರೆ ಪಟ್ಟಿಯನ್ನು ನಾವಿಗೇಟ್ ಮಾಡಬಹುದಾಗಿದೆ. ಜೊತೆಗೆ ಕರೆ ಮಾಡುವವರನ್ನು ತಮ್ಮ ಹೆಸರು ಹಾಗೂ ಯಾವ ಉದ್ದೇಶಕ್ಕೆ ಕರೆ ಮಾಡುತ್ತಿರುವುದಾಗಿ ಸ್ವಯಂಚಾಲಿತವಾಗಿ ಕೇಳುತ್ತದೆ. ಆ ಮಾಹಿತಿಯನ್ನು ಕರೆ ಸ್ವೀಕರಿಸುವ ವ್ಯಕ್ತಿಗೂ ತಿಳಿಸುತ್ತದೆ. ಇಷ್ಟವಾದಲ್ಲಿ ಕರೆ ಸ್ವೀಕರಿಸಬಹುದು ಇಲ್ಲವಾದಲ್ಲಿ ತಿರಸ್ಕರಿಸಬಹುದು

### ಎಐಗೂ ಹೊಸ ಸ್ಪರ್ಶ

ಸ್ಯಾಮ್‌ಸಂಗ್‌ನ ಉನ್ನತ ಶ್ರೇಣಿಯ ಫೋನ್‌ಗಳಲ್ಲಿ ಲಭ್ಯವಿರುವ ಲೈವ್ ಟ್ರಾನ್ಸಲೇಷನ್‌ನಂತಹ ಫೀಚರ್ ಅನ್ನು 'ಐಓಎಸ್ 26'ನಲ್ಲಿ ಕಲ್ಪಿಸಲಾಗಿದೆ. ಕರೆ ಮಾಡುವವರು ಬೇರೆ ಭಾಷೆಯಲ್ಲಿ ಮಾತನಾಡುತ್ತಿದ್ದರೆ, ಅವರ ಧ್ವನಿಯನ್ನು ಆ್ಯಪಲ್ ಕೃತಕ ಬುದ್ಧಿಮತ್ತೆಯು ನಿಮ್ಮ ಭಾಷೆಗೆ ತರ್ಜುಮೆ ಮಾಡಿ ಲೈವ್ ಆಗಿಯೇ ಒದಗಿಸುತ್ತದೆ. ವಿಡಿಯೊ ಕರೆ ಅಥವಾ ನಾರ್ಮಲ್ ಕರೆಗಳಲ್ಲಿ ಇದು ಲಭ್ಯ.

ಆ್ಯಪಲ್ ಇಂಟೆಲಿಜೆನ್ಸ್ ಫೀಚರ್, ಐಫೋನ್ 15 ಪ್ರೊ ಮತ್ತು ಪ್ರೋ ಮ್ಯಾಕ್ಸ್ ಮತ್ತು ನಂತರ ಬಿಡುಗಡೆಗೊಂಡ ಎಲ್ಲ ಡಿವೈಸ್‌ಗಳಿಗೆ ಲಭ್ಯವಾಗಲಿದೆ. ಸರ್ಕಲ್ ಟು ಸರ್ಚ್ ಮಾದರಿಯ ಫೀಚರ್ ಅನ್ನು ವಿಶ್ಯುವಲ್ ಇಂಟೆಲಿಜೆನ್ಸ್ ಹೆಸರಿನಲ್ಲಿ ಪರಿಚಯಿಸಲಾಗಿದ್ದು, ಇದು ಐಫೋನ್ 11 ಮತ್ತು ನಂತರ ಬಿಡುಗಡೆಗೊಂಡ ಎಲ್ಲ ಡಿವೈಸ್‌ಗಳಿಗೆ ಮಾತ್ರ ಲಭ್ಯ.